

# ಡ್ರ್ಯಾಗನ್ ಫ್ರೂಟ್ ಕೃಷಿ
# ನಿವೃತ್ತ ಯೋಧನ ಖುಷಿ

ಸೇನೆಯಿಂದ ನಿವೃತ್ತಿ ಪಡೆದ ನಂತರ ಕೃಷಿಯಲ್ಲಿ ತೊಡಗಿಕೊಂಡ ಗೋಪಾಲಕೃಷ್ಣ ಕಾಂಚೋಡು ಅವರು 'ಡ್ರ್ಯಾಗನ್ ಫ್ರೂಟ್' ಬೆಳೆದು ಗೆಲುವು ಪಡೆದಿದ್ದಾರೆ. ಈ ಕೃಷಿಯ ಯಶಸ್ಸಿನ ಸೂತ್ರಗಳನ್ನೂ ಅವರು ಹಂಚಿಕೊಂಡಿದ್ದಾರೆ.

■ ಸಹನಾ ಕಾಂತಬೈಲು

ಮೆಕ್ಸಿಕೊ, ಅಮೆರಿಕ, ಥಾಯ್ಲೆಂಡ್, ವಿಯೆಟ್ನಾಂ, ಶ್ರೀಲಂಕಾದಲ್ಲಿ ಜನಪ್ರಿಯವಾಗಿರುವ, ಜೊತೆಗೆ ಕಡಿಮೆ ಸಕ್ಕರೆ ಅಂಶ, ಹೆಚ್ಚು ಕಬ್ಬಿಣದ ಅಂಶ, ಕ್ಯಾಲ್ಸಿಯಂ, ವಿಟಮಿನ್ ಹೊಂದಿರುವ ಡ್ರ್ಯಾಗನ್ ಫ್ರೂಟ್ ಆರೋಗ್ಯಕ್ಕೆ ಪೂರಕ. ಬೇಡಿಕೆ ಹೆಚ್ಚಿದ್ದರೂ ನಮ್ಮ ಕೃಷಿಕರಿಗೆ ಅಷ್ಟು ಪರಿಚಿತವಲ್ಲದ ಈ ಹಣ್ಣಿನ ಕೃಷಿ ಕರ್ನಾಟಕದ ಕೆಲವೆಡೆ ಕಂಡುಬರುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿರುವ ನಿವೃತ್ತ ಯೋಧ ಗೋಪಾಲಕೃಷ್ಣ ಕಾಂಚೋಡು ಒಂದು ಎಕರೆಯಲ್ಲಿ ಡ್ರ್ಯಾಗನ್ ಫ್ರೂಟ್ ಬೆಳೆದು ಯಶಸ್ವಿಯಾಗಿದ್ದಾರೆ.

ಗೋಪಾಲಕೃಷ್ಣ ಕಾಂಚೋಡು ಅವರು ಸೇನೆಯಲ್ಲಿ 18 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಪಡೆದ ನಂತರ ಕೃಷಿಗಿಳಿದರು. ಸರ್ಕಾರದಿಂದ ಸೈನಿಕರಿಗೆ ಕೊಡಲಾಗುವ ಜಮೀನಿನಲ್ಲಿ ಹಲವು ಜಾತಿಯ ಮಾವು, ಅಡಿಕೆ, ಕಾಳುಮೆಣಸು, ಪೇರಳೆ, ಬಾಳೆ, ತೆಂಗು ಬೆಳೆದರು. ಅದರಲ್ಲಿ ಒಂದು ಎಕರೆಯಲ್ಲಿ ಯಾವುದಾದರೂ ಹೊಸ ಲಾಭದಾಯಕ ಬೆಳೆಯನ್ನು ಹಾಕುವ ಯೋಚನೆಯಿಂದ ಮಾಹಿತಿ ಕಲೆಹಾಕುವಾಗ, ಯಾವುದೇ ಕಾಡುಪ್ರಾಣಿಗಳ ಹಾವಳಿ ಇಲ್ಲದೆ ಬೆಳೆಯಲು ಸುಲಭವಾಗಿರುವ ಡ್ರ್ಯಾಗನ್ ಫ್ರೂಟ್ ಹೆಸರು ತಿಳಿದುಬಂತು.

ನಾಲ್ಕು ವರ್ಷದ ಹಿಂದೆ ಹೊಸಪೇಟೆಯ ಡ್ರ್ಯಾಗನ್ ಫ್ರೂಟ್ ತೋಟದಿಂದ 8ರಿಂದ 9 ಇಂಚು ಉದ್ದ ಇರುವ ಕಡ್ಡಿಗೆ ರೂ. 93ರಂತೆ 2000 ಕಡ್ಡಿಗಳನ್ನು ತಂದು ಬೆಳೆಸಲು ಆರಂಭಿಸಿದ್ದು, ಈಗ ಅವೆಲ್ಲವೂ ಲಾಭದ ಬಾಬತ್ತಾಗಿವೆ.

ಡ್ರ್ಯಾಗನ್ ಹಣ್ಣಿನ ಗಿಡ ನೆಡುವ ಮೊದಲೇ ಸಾಲಿನಿಂದ ಸಾಲಿಗೆ 10 ಅಡಿ, ಕಂಬದಿಂದ ಕಂಬಕ್ಕೆ 8 ಅಡಿ ಅಂತರದಲ್ಲಿ ಎರಡು ಅಡಿ ಆಳಕ್ಕೆ ಸಿಮೆಂಟಿನ ಕಂಬ ನೆಟ್ಟು ಗಟ್ಟಿ ಮಾಡಬೇಕು. ಪ್ರತಿ ಕಂಬಕ್ಕೆ ನಾಲ್ಕರಂತೆ ಗಿಡ ನೆಡುವುದು. ಗುಂಡಿ ಮಾಡಿ ಇದನ್ನು ನೆಡಲು ಇಲ್ಲ. ಕಂಬವನ್ನು ಆಧರಿಸಿ ನೆಲದಿಂದ ಒಂದು ಸೆಂಟಿ ಮೀಟರ್ ಆಳದಲ್ಲಿ ಗಿಡವನ್ನು ಊರಿಬಿಟ್ಟರೆ ಸಾಕು. ಹಾಗೆಯೇ ನೆಲದ ಮೇಲೆ ಇಟ್ಟರೂ ಬೇರನ್ನು ಮಣ್ಣಿನ ಒಳಗೆ ಇಳಿಸಿಬಿಡುತ್ತದೆ. ಬೇಸಿಗೆಯಲ್ಲಿಯೂ ನೀರಿನ ಅವಶ್ಯಕತೆ ಇರುವುದಿಲ್ಲ.

'ನೆಟ್ಟ ಒಂದು ವರ್ಷದಲ್ಲಿ 4 ದಿನಗಳಿಗೊಮ್ಮೆ ಕೇವಲ 2 ಲೀಟರ್ ನೀರನ್ನು ಒಂದು ಕಂಬಕ್ಕೆ ಹಾಕುತ್ತಿದ್ದೆ' ಎನ್ನುತ್ತಾರೆ ಗೋಪಾಲಕೃಷ್ಣ. ಕಂಬಕ್ಕೆ ಆಧಾರವಾಗಿ ಸಸಿ ಬೆಳೆಯುತ್ತ ಹೋದ ಹಾಗೆ ಕಂಬದ ಮೇಲ್ಭಾಗದಲ್ಲಿ ರಂಧ್ರ ಹೊಂದಿರುವ ಸಿಮೆಂಟಿನ ಹಲಗೆ ಅಳವಡಿಸಬೇಕು. ಸಸಿ ಮರಳಿ ಕೆಳಕ್ಕೆ ನೇತು ಬೀಳುವುದರಿಂದ ಹಲಗೆ ಅಳವಡಿಸುವುದು ಅವಶ್ಯ. ಒಂದು ಕಂಬ ಮತ್ತು ಮೇಲ್ಭಾಗದ ರಚನೆಗೆ 419 ರೂಪಾಯಿ ಖರ್ಚು ತಗುಲಿದ್ದು, ಎಕರೆಗೆ 540 ಕಂಬ ಹಿಡಿಯುತ್ತದೆ. ಒಂದು ಎಕರೆಗೆ ಅವರು

